ಆಶ್ಚರ್ಯವಿಲ್ಲ. ಫ್ಲ್ಯಾಟ್ ಓನರ್ಸ್ ಹಿತಾಸಕ್ತಿಯಿಂದ ಐ ಯ್ಯಾಮ್ ರಿಕ್ವೆಸ್ಟಿಂಗ್ ಎವರಿಒನ್ ಟು ಪ್ಲೀಸ್ ಚೆಕ್ ಯುವರ್ ವಾಲ್ಸ್ ಕೇರ್‌ಫುಲಿ ಬಿಫೋರ್ ಡಿನ್ನರ್ ಟುನೈಟ್. ಇದೇ ರೀತಿ ಬಿರುಕಿದ್ದಲ್ಲಿ ಸೆಕ್ರೇಟರಿಗೆ ಮೆಸೇಜ್ ಫಾರ್‌ವರ್ಡ್ ಮಾಡಿ, ಈ ವೀಕೆಂಡ್ ತುರ್ತಾಗಿ ಆಸೋಸಿಯೇಷನ್ ಮೀಟಿಂಗ್ ಏರ್ಪಡಿಸುವ ಅಗತ್ಯವಿದೆ.' ಎಂಬ ಸ್ಟೇಟಸ್ ಹಾಕಿ ಫೋಟೋ ಅಪ್‌ಲೋಡ್ ಮಾಡಿ, ಫೇಸ್‌ಬುಕ್‌ನಿಂದ ಹೊರಬರುತ್ತಿದ್ದಂತೆ ಪಾಯಿಂಟ್ ನಂಬರ್ ಒನ್ ಗೋಚರಿಸಿ, ಏನು ಬರೆಯಲು ಪಾಯಿಂಟ್ ಹಾಕಿಕೊಳ್ಳುತ್ತಿದ್ದೆ ಎಂದು ಕ್ಷಣ ನೆನಪು ಕೆದಕಿ, ಸ್ಪಷ್ಟವಾಗಿದ್ದೇ ಗೊಂದಲಗೊಂಡ. ತಾನು ಪಾಯಿಂಟ್ ನಂಬರ್ ಒನ್ ಏನೂ ಬರೆದಿಲ್ಲ ಎನ್ನುವುದು ನೆನಪಾಗಿ, ಅದು ಹೇಗೆ ಇಷ್ಟೊಂದು ಪ್ರಮುಖ ವಿಷಯವನ್ನೆ ಮರೆತೆನೆಂದು ತಿಳಿಯದೆ ಸ್ವಲ್ಪ ದೀರ್ಘವಾಗಿ ಯೋಚಿಸಿ ಮೊದಲ ಅಂಶವನ್ನು ದಾಖಲಿಸಿದ:

ಆದಷ್ಟು ಬೇಗ ಟೀಮ್ ಲೀಡರ್‌ಗೆ ಫೋನ್ ಮಾಡಿ, ಮಾರಣಾಂತಿಕ ಕಾಯಿಲೆಯ ವಿಷಯ ತಿಳಿಸಿಬಿಡಬೇಕು!

ಪಕ್ಕನೇ ನಗುಬಂತು. ಮಾರಣಾಂತಿಕವೆಂದರೆ ಏನೆಂದು ಯಾರಾದರೂ ವಿಚಾರಿಸಿದರೆ ಏನು ಹೇಳುವುದು? ಮತ್ತೆ ಗೊಂದಲ ಶುರುವಾಯಿತು. ಡಾಕ್ಟರ್‌ಗೆ ಫೋನ್ ಮಾಡಿ ಕೇಳಲೆ? ಯೋಚಿಸಿದ. ಕಣ್ಣು ಗಡಿಯಾರದತ್ತ ಸರಿದಿದ್ದೇ ಮತ್ತೊಂದು ಗಂಟೆ ಕಳೆದು ಹೋಗಿರುವುದು ಗಮನಕ್ಕೆ ಬಂದು ಯಾಕೋ ಮೊದಲು ದಾಖಲಿಸಿದ ಸಮಯಕ್ಕೂ ಈಗಿನ ಈ ಸಮಯಕ್ಕೂ ತಾಳೆಯಾಗುತ್ತಿಲ್ಲವೆನ್ನಿಸಿ, ಮತ್ತೆ 'ಪಾಯಿಂಟ್ ನಂಬರ್ ಒನ್'ಗೆ ಹೋಗಿ, '9.30'ನ್ನು ಡಿಲೀಟ್ ಮಾಡಿ '10.50' ಎಂದು ಸರಿಪಡಿಸಿದ. ಸಂಜೆ ಡಾಕ್ಟರನ್ನು ನೋಡಿ ಬಂದು ಆಗಲೇ ಮೂರ್‍ನಾಲ್ಕು ಗಂಟೆಗಳೇ ಉರುಳಿಹೋಗಿವೆಯೆಂದು ಅರಿವಾಗುತ್ತಿದ್ದಂತೆ ಹೊಟ್ಟೆಯೊಳಗೆ ಏನೋ ಕಲೆಸಿದಂತಾಗಿ ಚಡಪಡಿಸಿದ. ತಾನು ಬರೆದ ಮಾರಣಾಂತಿಕ ಎಂಬ ವಿಷಯದ ಮೇಲೆ ಕಣ್ಣು ಗಕ್ಕನೆ ನಿಂತಾಗ, ಏನೇನು ಮಾರಣಾಂತಿಕ ಕಾಯಿಲೆಗಳು ಇರಬಹುದೆಂದು ಚಿಂತಿಸತೊಡಗಿದ. ಕ್ಯಾನ್ಸರೆ, ಏಡ್ಸೇ? ಅವೆರಡೂ ತನಗೆ ಬರುವ ಚಾನ್ಸೇ ಇಲ್ಲವೆನ್ನಿಸಿತು. ಕೇವಲ ಏಳು ದಿನದೊಳಗೆ ಮೊಳೆತು, ಬೆಳೆದು, ಕೊಳೆತು ಸಾಯಿಸುವಂತಹದ್ದು ಯಾವುದಿರಬಹುದೆಂದು ಎಷ್ಟು ಯೋಚಿಸಿದರೂ ಹೊಳೆಯದೆ ಇಂಟರ್‌ನೆಟ್ ತೆರೆದು ಗೂಗಲ್ ಸರ್ಚ್ ಹಾಕಿದ. ಹೃದಯಕ್ಕೆ ಸಂಬಂಧಿಸಿದ್ದು, ಕಿಡ್ನಿಗೆ ಸಂಬಂಧಿಸಿದ್ದು, ಯಕೃತ್ತಿಗೆ ಸಂಬಂಧಿಸಿದ್ದು, ರಕ್ತಕ್ಕೆ ಸಂಬಂಧಿಸಿದ್ದು ತರಹಾವಾರಿ ಕಾಯಿಲೆಗಳ ಬೇಸಿಕ್ ಸಿಂಪ್ಟಮ್ಸ್‌ಗಳನ್ನೆಲ್ಲಾ ಒಂದೇ ಸಮನೆ ಓದಿ ತನ್ನ ತಲೆಯೇ ಕೆಟ್ಟುಹೋದಂತೆ ಅನ್ನಿಸಿತು.

'ತಥ್!' ನೆಟ್‌ನಿಂದಾಚೆ ಬರುತ್ತಿದ್ದಂತೆ ಯಾಕೋ ಮನಸ್ಸಿಗೆ ಅಳುಕಾಯಿತು. ಅದೆಷ್ಟು ವರುಷಗಳಿಂದ ಈ ಅವಕಾಶಕ್ಕಾಗಿ ಹಂಬಲಿಸುತ್ತಿದ್ದೆ. ಹೃದಯ ಆರ್ದ್ರಗೊಳ್ಳುತ್ತಿದ್ದಂತೆ, ಎಲ್ಲಕ್ಕಿಂತ ಮೊಟ್ಟ ಮೊದಲು ಆಗಬೇಕಾದ ಕಾರ್ಯ ನಿಜಕ್ಕೂ ಇದೇ ಏನು? ಇದನ್ನು ಮೊದಲು ಎಲ್ಲರಿಗೂ ಜಗಜಾಹ್ಹೀರುಗೊಳಿಸಬೇಕೆ? ಅನುಮಾನಿಸುತ್ತಾ ಒಂದಷ್ಟು ಹೊತ್ತು ಕೂತ. ಹಾಗಾದರೆ ಈ ಬಾರಿಯೂ ಜರ್ಮನಿ ಸರದಿ ಕೈ ತಪ್ಪಿದ ಹಾಗೆಯೇ.

ಅರೆ, 'ಈ ಬಾರಿ' ಎಂದೇಕೆ ಯೋಚಿಸುತ್ತಿದ್ದೇನೆ ತಾನು? ಅಂದರೆ ಮತ್ತೊಂದು ಬಾರಿ ಇದೆಯೆಂದೆ? ತಾನು ಸತ್ತ ನಂತರವೂ ಬದುಕಿರುತ್ತೇನೆಂದು ಮನಸ್ಸು ಯೋಚಿಸುತ್ತಿದೆಯೋ ಅಥವಾ ನಿರ್ದಿಷ್ಟ ಅವಧಿಯ ನಂತರ ಕೈಗೊಳ್ಳಲಿರುವ ತನ್ನ ಖಚಿತ ಸಾವೇ ತನ್ನ ಮನದಲ್ಲಿನ್ನೂ ಸ್ಥಿರವಾಗಿ ಬೇರೂರಿಲ್ಲವೋ? ಸಾವೆಂಬ ಸಾವಿನ ಗಂಭೀರ ಸ್ವರೂಪ ಕೂಡಾ ಇನ್ನೂ